(ಕ) ಆಲೂರು - ಸಿದ್ಧಾಪುರ ಏತ ನೀರಾವರಿ ಯೋಜನೆ ಬಗ್ಗೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) :— ಮಾನ್ಯ ಅಧ್ಯಕ್ಷರೆ ಭಾರಿ ನೀರಾವರಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ. ಕಳೆದ 4 ವರ್ಷಗಳಿಂದ ಆಲೂರು-ಸಿದ್ಧಾಪುರ ಏತ ನೀರಾವರಿ ಯೋಜನೆ ಬಗ್ಗೆ ಈ ಸದನದಲ್ಲಿ ಪ್ರಶ್ನೋತ್ತರ ಮೂಲಕ ಹಾಗೂ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ನನಗೆ ಅವರಿಂದ ನಿರ್ದಿಷ್ಟವಾದ ಉತ್ತರ ಸಿಗುತ್ತಿಲ್ಲ. 8 ಸಲ ಪರಿಶೀಲಿಸಲಾಗುವುದೆಂದು ಅವರು ತಿಳಿಸಿರುವುದರಿಂದ ನಿರ್ದಿಷ್ಟವಾಗಿ ಉತ್ತರವನ್ನು ಕೊಡಬೇಕು. ಆಲೂರು ಹಾಗೂ ಸುತ್ತಮುತ್ತಲಿನ 10 ಗ್ರಾಮಕ್ಕೆ 10 ಸಾವಿರ ಎಕರೆ ಜಮೀನಿಗೆ ನೀರಾವರಿ ಆಗುವುದರಿಂದ ಈ ವರ್ಷದಿಂದಲೇ ಕೆಲಸವರನ್ನು ಪ್ರಾರಂಭ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಮಾನ್ಯ ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೆ ಟೆಕ್ನಿಕಲ್ ಫೀಸಬಲ್‌ಗೆ ಬರುವುದಿಲ್ಲವೆಂದು ಸರ್ವೆ ಮಾಡಿ ಇನ್ವೆಸ್ಟಿಗೇಷನ್ ಮಾಡಿದ ಮೇಲೆ ಇದಕ್ಕೆ ಎರಡು-ಮೂರು ಕಾರಣಗಳನ್ನು ಕೊಟ್ಟಿದ್ದಾರೆ. 7 ಸಾವಿರ ಎಕರೆ ಜಮೀನಿಗೆ 30 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಇದರಲ್ಲಿ ಒಂದು ಕಿ.ಮಿ.ನಷ್ಟು ರಿಸರ್ವ್ಡ್ ಫಾರೆಸ್ಟ್‌ನಲ್ಲಿ ಕೆನಾಲ್ ಹೋಗುತ್ತದೆ. 8 ಕಿ.ಮಿ. ರೈಸಿಂಗ್ ಮೈನ್ ಹೋಗಬೇಕು. ಮೈನ್ ಕೆನಾಲ್‌ನಿಂದ ನೀರು ಎತ್ತಬೇಕು, ಫಾರೆಸ್ಟ್‌ನಲ್ಲಿ ಕೂಡ ಹೋಗುವ ಕಾರಣದಿಂದ ಅವರು ಆಗುವುದಿಲ್ಲ, ಟೆಕ್ನಿಕಲಿ ಫೀಸಿಬಲ್ ಅಲ್ಲವೆಂದು ನಮಗೆ ರಿಪೋರ್ಟ್ ಬಂದಿದೆ. ಇದರ ಬಗ್ಗೆ ಮುರು ಪರಿಶೀಲನೆ ಮಾಡಿ, ಒಂದು ಸಭೆ ಮಾಡಿ ತಮ್ಮನ್ನು ಕರೆಯುತ್ತೇನೆ, ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಮೈನ್ ಕೆನಾಲ್‌ನಿಂದ ಯಾವುದೇ ಲಿಫ್ಟ್ ಇರಿಗೇಷನ್ ಮಾಡುವುದಕ್ಕೇ ಬರುವುದಿಲ್ಲ.

ಅಧ್ಯಕ್ಷರು :— ಈ ಎರಡು ತಿಂಗಳಿಗೆ ಇಷ್ಟು ಕೆಲಸವಾಗಲಿ, ಉಳಿದದ್ದನ್ನು ಮುಂದೆ ನೋಡಿಕೊಳ್ಳೋಣ.

ಶ್ರೀ ಎಂ.ಪಿ. ಅಪಚ್ಚು ರಂಜನ್ :— ಮಾನ್ಯ ಅಧ್ಯಕ್ಷರೆ, ನಮಗೆ 50 ಕ್ಯೂಸೆಕ್ಸ್ ನೀರು ಸಿಕ್ಕರೆ ಸಾಕು, ನಮಗೆ ಹೆಚ್ಚಿಗೆ ಬೇಡ. ದಯವಿಟ್ಟು ಅದನ್ನು ಅವರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಖ) ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಹಿಪ್ಪರಗಿ ಬ್ಯಾರೇಜ್ ಹಾಗೂ ಆಲಮಟ್ಟಿ ಡ್ಯಾಂ ಎತ್ತರದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆಸಿದ ಮಾಹಿತಿಯನ್ನು ಸುದ್ದಿಗಾರರ ಜೊತೆ ಮಾತನಾಡಿರುವುದು.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮೊನ್ನೆ ನಾನು ಈ ಪ್ರಶ್ನೆಯನ್ನು ಎತ್ತಿದ್ದೇನೆ. ಪುನ: ನಾನು ಇದನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸುದ್ದಿಗಾರರ ಜೊತೆ

ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಹಿಪ್ಪರಗಿ ಬ್ಯಾರೇಜ್ ಹಾಗೂ ಆಲಮಟ್ಟಿ ಅಣೆಕಟ್ಟು ಎತ್ತರದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಜೊತೆಯಲ್ಲಿ ಏನು ಚರ್ಚೆಯಾಗಿದೆ ಅದರ ಬಗ್ಗೆ ಕೆಲವು ಮಾಹಿತಿಗಳನ್ನು ಹಾಗೂ ವಿವರಣೆಗಳನ್ನು ಸದನದ ಹೊರಗಡೆ ಹೇಳಿದ್ದಾರೆ. ತಾವು ಇಲ್ಲಿ ಮಾತನಾಡುವಾಗ ಮಾನ್ಯ ನಾಗೇಗೌಡರು ಇದ್ದರು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬರುತ್ತಾರೆಂದೂ ಇದರ ಬಗ್ಗೆ ಒಂದು ಸ್ಪಷ್ಟೀಕರಣ ಕೊಡುತ್ತಾರೆ, ಅಲ್ಲಿ ಯಾವ ರೀತಿಯಾಗಿ ಮಾತುಕತೆ ನಡೆದಿದೆ ಎನ್ನುವುದರ ಬಗ್ಗೆ ಕೂಡ ವಿವರವನ್ನು ಕೊಡುತ್ತಾರೆಂದು ಹೇಳಿದ್ದೀರಿ. ಆದರೆ ಇವತ್ತಿನ ಪತ್ರಿಕೆಯಲ್ಲಿ, ಶನಿವಾರ ಮಹಾರಾಷ್ಟ್ರದ ಮುಖ್ಯಮಂತ್ರಿಯಾದ ಶ್ರೀ ನಾರಾಯಣ್‌ರವರ ಜೊತೆ ಮಾತುಕತೆಯನ್ನು ನಡೆಸಿ ನಗರಕ್ಕೆ ಹಿಂತಿರುಗಿದ ನಂತರ ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಮುಖ್ಯಮಂತ್ರಿಯವರು ಈ ತಿಂಗಳ 19 ರಂದು ಮಹಾರಾಷ್ಟ್ರದ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಅರ್ಜಿಯು ವಿಚಾರಣೆಗೆ ಬರಲಿದೆ. ಆಗ ಮೊಕದ್ದಮೆಯನ್ನು ಮುಂದಕ್ಕೆ ಹಾಕಬೇಕೆಂಬ ಮನವಿಯನ್ನು ಮಾಡಬೇಕೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ನಾನು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗ ಆಲಮಟ್ಟಿ ಅಣೆಕಟ್ಟು ಮತ್ತು ಹಿಪ್ಪರಗಿ ಬ್ಯಾರೇಜ್ ಆಂದ್ರಪ್ರದೇಶ ವಿರೋಧವನ್ನು ವ್ಯಕ್ತಪಡಿಸಲು ಕಾರಣಗಳು ಇರಬಹುದು, ಆದರೆ ಈ ಬಗ್ಗೆ ನೀವು ಆಕ್ಷೇಪವನ್ನು ವ್ಯಕ್ತಪಡಿಸಿ ನ್ಯಾಯಾಲಯಕ್ಕೆ ಹೋಗುವುದಕ್ಕೆ ಕಾರಣಗಳು ಇರಲಿಲ್ಲವೆಂದು ಅವರಿಗೆ ತಿಳಿಸಿದ್ದೆ, ಆಗ ಅವರು ತಮ್ಮನ್ನು ತಮ್ಮ ಭೂಮಿ ಮುಳುಗಡೆಯಾಗುವ ವಿಚಾರವನ್ನು ಪ್ರಸ್ತಾಪಿಸಿದರು ಎಂದು ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ತಿಳಿಸಿದರು. ಈಗ ನಡೆಯುತ್ತಿರುವ ಜಂಟಿ ಸಮೀಕ್ಷೆ ಸುಮಾರು ಪ್ರತಿಶತ 80ರಷ್ಟು ಮುಗಿದಿದೆ. ಇನ್ನು 3-4 ತಿಂಗಳಲ್ಲಿ ಸಮೀಕ್ಷೆಯು ಮುಗಿಯುತ್ತದೆ. ಅಲ್ಲಿಯವರೆಗೆ ನಾವು ಕಾಯುತ್ತೇವೆಂದು ಅವರು ಹೇಳಿದರು. ಈ ಪ್ರವಾಸ ಯಶಸ್ವಿಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದರು; ಈ ರೀತಿಯಾಗಿ ಬಂದಿದೆ. ಈ ಸದನದಲ್ಲಿರುವಂತಹ ಎಲ್ಲಾ ಸದಸ್ಯರು ಕೂಡ ಒಂದು ಅಪೇಕ್ಷೆ ಪಟ್ಟಿದ್ದೆವು. ಅದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಮುಂಚೆ ಎಲ್ಲರನ್ನು ಕರೆಸಿ ಮಾತನಾಡುತ್ತಾರೆ, ಮತ್ತು ಯಾವ ವಿಷಯದ ಬಗ್ಗೆ ಚರ್ಚೆಯನ್ನು ಮಾಡುತ್ತಾರೆ, ಏನು ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂದು ಹೋಗುತ್ತಿದ್ದಾರೆ ಎನ್ನತಕ್ಕಂತದ್ದರ ಬಗ್ಗೆ ಮಾಹಿತಿಯನ್ನು ಕೊಟ್ಟು, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಲ್ಲಿಗೆ ಹೋಗುತ್ತಾರೆಂದು ಅಪೇಕ್ಷೆ ಇತ್ತು. ಆದರೆ ಈ ಕೆಲಸವನ್ನು ಅವರು ಮಾಡಲಿಲ್ಲ. ಅವರು ಅಲ್ಲಿದ ಹೋಗಿ ಬಂದ ಮೇಲೆ ಏನು ಮಾತುಕತೆಯು ನಡೆದಿದೆ ಎಂಬುದರ ಬಗ್ಗೆ ಈ ಸದನಕ್ಕಾದರೂ ತಿಳಿಸುತ್ತಾರೆ; ಏಕೆಂದರೆ ಸದನವು ಇವತ್ತು ನಡೆದಿದೆ, ಸದನ ಇಲ್ಲದೆ ಇದ್ದರೆ ಅವರು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರೆ ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ; ಆಕ್ಷೇಪಣೆಯೂ ಕೂಡ ಇರಲಿಲ್ಲ. ಅವರು ಅಲ್ಲಿಗೆ ಹೋದಮೇಲೆ ಮಾನ್ಯ ಮುಖ್ಯಮಂತ್ರಿಗಳ ಪ್ರೆಸ್ ಸೆಕ್ರೆಟರಿಯವರು ಒಂದು ಹೇಳಿಕೆಯನ್ನು ಕೊಟ್ಟರು. ಅದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ

ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಎಂ.ಪಿ ಪ್ರಕಾಶ್‌ರವರು ಅದರ ಬಗ್ಗೆ ಎಕ್ಸ್‌ಪ್ಲನೇಷನನ್ನು ಕೊಟ್ಟರು, ಕೊನೆಗೆ ಅದು ಸರಿಯಿಲ್ಲವೆಂದು ನಾನು ಕ್ಷಮೆಯನ್ನು ಕೇಳುತ್ತೇನೆ ಎಂದು ಹೇಳಿದರು ಅದರ ಬಗ್ಗೆ ನಾವು ಪ್ರಸ್ತಾಪ ಮಾಡಲಿಲ್ಲ. ಪುನ: ಬೆಂಗಳೂರಿನಲ್ಲಿ ನಿನ್ನೆ ಮುಖ್ಯಮಂತ್ರಿಗಳು ಈ ವಿಷಯವನ್ನು ಪ್ರಸ್ತಾಪ ಮಾಡಿದರು; ನಾನು ಅವರನ್ನು ಕೇಳುತ್ತೇನೆ ಈ ಸದನಕ್ಕೆ ಏನಾದರೂ ಗೌರವವಿದೆಯೇ, ಅಥವಾ ಇಲ್ಲವೋ ಈ ಸದನವನ್ನು ಕಡೆಗಣಿಸಿ ನೀವು ಹೊರಗಡೆಯಿಂದ ಸ್ಟೇಟ್‌ಮೆಂಟ್ ಕೊಡುತ್ತೇವೆಂದರೆ, ನೀವು ಸದನವರನ್ನು ಏತಕ್ಕಾಗಿ ಕರೆಯುತ್ತೀರಿ? ಸದನವು ಅಸ್ತಿತ್ವದಲ್ಲಿದ್ದಾಗಲೂ ಕೂಡ ಸದನವು ಇವತ್ತು ನಡೆಯುವಾಗಲೂ ಕೂಡ ಸದನವು ಇವತ್ತು ನಡೆಯುವಾಗಲೂ ಕೂಡ, ನೀವು ಇಲ್ಲಿ ಹೇಳಿಕೆಗಳನ್ನು ಕೊಡಲಿಕ್ಕೆ ನಿಮಗೆ ಹುಷಾರುರುವುದಿಲ್ಲ, ಇಲ್ಲಿಗೆ ಬರುವುದಿಲ್ಲ, ಆದರೆ ನಿಮ್ಮ ಪಕ್ಷದ ಕಾರ್ಯಕ್ರಮಗಳ ಉದ್ಘಾಟನೆಯನ್ನು ಮಾಡಲಿಕ್ಕೆ ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರದ ಕಡೆಗೆ ಓಡಾಡುತ್ತೀರಿ. ಆದರೆ ಇಲ್ಲಿಗೆ ಬಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದೇ ಮಾತುಗಳನ್ನು ಹೊರಗಡೆ ಹೇಳುತ್ತೀರಿ. ಆದರೆ ಇದು ಹರಿಯಿಲ್ಲ. ಏಕೆಂದರೆ ಈ ಸದನದ ಸಂಪ್ರದಾಯದಲ್ಲಿ ಈ ರೀತಿಯಾಗಿ ಯಾರೂ ಕೂಡ ನಡೆದುಕೊಳ್ಳಲಿಲ್ಲ. ಏಕೆಂದರೆ ಒಳ್ಳೆಯ ಸಂಪ್ರದಾಯಗಳನ್ನು ಹಾಕಿದ್ದೇವೆ. ಆ ಸಂಪ್ರದಾಯಗಳನ್ನು ಮುರಿಯತಕ್ಕಂತಹ ಪ್ರಯತ್ನವನ್ನು ನೀವೇ ಮಾಡಿದರೆ ಇದಕ್ಕೆ ಯಾರು ರಕ್ಷಣೆಯನ್ನು ಕೊಡುತ್ತಾರೆ? ಈ ಮನೆಯ ಮುಖಂಡರು, ಸದನದ ನಾಯಕರೇ ಈ ರೀತಿಯಾಗಿ ವರ್ತನೆಯನ್ನು ಮಾಡಿದಾಗ ನಾವು ಯಾರಿಗೆ ಹೇಳಬೇಕು. ಈ ಒಳ್ಳೆಯ ಸಂಪ್ರದಾಯವನ್ನು ಮುಂದುವರಿಸಿ ಹೇಳಿ, ಇದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ಇದು ಏನಾಗಿದೆಯೆಂದರೆ, ಅವರು ಯಾವುದೇ ರೀತಿಯಿಂದ ಏನಾದರೂ ಹೇಳಿಕೊಳ್ಳಲಿ, ಸದನವು ನಡೆಯುತ್ತದೆ, ಅವರು ಮಾತನಾಡಿಕೊಳ್ಳಲಿ, ನಾವು ಉತ್ತರವನ್ನು ಕೊಡಬೇಕಾಗಿಲ್ಲ, ಆದರ ಸಮಯ ಸಿಕ್ಕಿದರೆ ಮಾತ್ರ ಉತ್ತರವನ್ನು ಕೊಡೋಣ, ಇಲ್ಲ ಅಂದರೆ ಸುಮ್ಮನಿರೋಣ- ಎನ್ನುವವರೆಗೆ ಬಂದಿದ್ದಾರೆ. ಏಕೆಂದರೆ ಸದನವು ಇನ್ನು 3-4 ದಿವಸಗಳು ಮಾತ್ರ ನಡೆಯುತ್ತದೆ. ಇಳಿದ 3-4 ದಿವಸಗಳಲ್ಲಿ ಇದೇ ರೀತಿಯಾಗಿ ಸದನವನ್ನು ನಡೆಸಿಕೊಂಡು ಹೋದರೆ ಕೊನೆಗೆ ಗಿಲೋಟಿನ್ ಹಾಕಿಕೊಂಡು ನಾವು ಹೋಗೋಣವೆಂದು ಆ ವಿಚಾರದಲ್ಲಿ ಇದ್ದಾರೆ. ಅಂದರೆ ಕರೆಯುವಂತಹ ಪ್ರಯೋಜನವಿರಲಿಲ್ಲ. ನಾವು ಯಾವುದಕ್ಕೂ ಉತ್ತರವನ್ನು ಕೊಡುವುದಿಲ್ಲ, ತಾವು ಎತ್ತಿದಂತಹ ಸಮಸ್ಯೆಗಳಿಗೆ ಸ್ಪಂದಿಸುವಂತಹ ಅವಶ್ಯಕತೆಯಿಲ್ಲ. ನಾವು ಚುನಾವಣೆಯನ್ನು ಎದುರಿಸುವ ಸಲುವಾಗಿ ಜನರ ಮುಂದೆ ಹೋಗುತ್ತಿದ್ದೇವೆ. ಅದಕ್ಕೆ ನಾವು ಕರೆಯುವುದಿಲ್ಲವೆಂದರೆ ಸಾಕು ತಾವು ಅದನ್ನೆ ಮಾಡಿಕೊಂಡು ಹೋಗಿ. ನಾವು ಜನರ ಮುಂದೆ ಹೋಗಿ ಕೇಳುತ್ತೇವೆ, ನಾವು ಸದನವನ್ನು ಕರೆಯಿರಿ ಎಂದು ಹೇಳಿದೆವು, ಅವರು ಸಂಪ್ರದಾಯದ ಪ್ರಕಾರ ಸದನವರನ್ನು ಕರೆಯಬೇಕಾಗಿತ್ತು, ಬಜೆಟ್ ಸೆಷನ್ಸ್ ಇದ್ದು, ಅದರಲ್ಲಿ ಪ್ರತಿಯೊಂದು ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಗಳು ಆಗಿ ಏನಾದರ ಸಹಾಯವನ್ನು ಮಾಡುತ್ತಾರೆಂಬ ನಂಬಿಕೆಯಿಂದ ನಾವು ಸದನವರನ್ನು ಕರೆಯಿರಿ

ಎಂದು ಹೇಳಿದ್ದಕ್ಕೆ ಬೆಲೆಯೇ ಇಲ್ಲವೆಂದರೆ, ಅದಕ್ಕೆ ಮಹತ್ವವೇ ಇಲ್ಲವೆಂದಾಗ ನಾವು ಏತಕ್ಕಾಗಿ ಈ ಸದನದಲ್ಲಿ ಕುಳಿತುಕೊಳ್ಳಬೇಕು, ತಾವು ಸುಮ್ಮನೆ ಅಡ್ಜರ್ನ್ ಮಾಡಿ, ನಮ್ಮ ಮನೆಗೆ ನಾವು ಹೋಗೋಣ, ಮುಂದೆ ಏನಾಗುತ್ತದೆ ಎಂಬುದರ ಬಗ್ಗೆ ಜನರು ತೀರ್ಮಾನವನ್ನು ತೆಗೆದುಕೊಳ್ಳಲಿ, ಈ ತೀರ್ಮಾನದ ಪ್ರಕಾರ ನಾವು ನಡೆದುಕೊಳ್ಳೋಣ. ಆದರೆ, ತಾವು ಯಾವ ರೀತಿಯಾಗ ನಡೆದುಕೊಳ್ಳುತ್ತಿದ್ದೀರಿ, ಇದನ್ನು ಮುಂದೆ ಬರುವಂತಹ ಪೀಳಿಗೆಯ ನೋಡುತ್ತದೆ, ಮುಂದೆ ಬರುವಂತಹ ಸದಸ್ಯರುಗಳು ಸಹ ನೋಡುತ್ತಾರೆ, ಆ ನಿಮ್ಮ ನಡವಳಿಕೆಗಳ ಬಗ್ಗೆ ನೀವು ಯಾವ ಸಂಪ್ರದಾಯವನ್ನು ಬಿಟ್ಟು ಹೋಗಿದ್ದೀರಿ ಎನ್ನುವ ಬಗ್ಗೆ ಅವರು ಅಭ್ಯಾಸವನ್ನು ಮಾಡುತ್ತಾರೆ. ಅದಕ್ಕೂ ಕೂಡ ನೀವು ಗೌರವವನ್ನು ಕೊಡುವುದಿಲ್ಲ ಎಂದರೆ ನಿಜವಾಗಲೂ ಕೂಡ ನಾವು ಪ್ರಜಾಪ್ರಭುತ್ವದ ನೀತಿಗೆ, ತತ್ವಕ್ಕೆ ಮೋಸ ಮಾಡುತ್ತಿದ್ದೇವೆ, ದ್ರೋಹವನ್ನು ಬಗೆಯುತ್ತಿದ್ದೇವೆ ಎನ್ನುವಂತಹ ಸಂಶಯ ನನಗೆ ಬರುತ್ತಿದೆ. ನಾವು ಈ ಸದನಕ್ಕೆ ಅವಮಾನವನ್ನು ಮಾಡುತ್ತಿದ್ದೇವೆ ಎನ್ನುವಂತಹ ಸಂಶಯ ನನಗೆ ಬರುತ್ತಿದೆ. ನಾವು ಈ ಸದನಕ್ಕೆ ಅವಮಾನವನ್ನು ಮಾಡುತ್ತಿದ್ದೇವೆ, ಡೀಗ್ರೇಡ್ ಮಾಡುತ್ತಿದ್ದೇವೆ ಎನ್ನುವಂತಹ ಭಾವನೆ ನನಗೆ ಬಂದಿದೆ. ಏಕೆಂದರೆ ಪ್ರಶ್ನೋತ್ತರಗಳ ಕಾಲದಲ್ಲಿ ಮಾನ್ಯ ಮಂತ್ರಿಗಳು ಇರುವುದಿಲ್ಲ, ಗಮನ ಸೆಳೆಯುವ ಸೂಚನೆ ಇದ್ದಾಗ ಅವರು ಇರುವುದಿಲ್ಲ, ಅನೇಕಸಾರಿ ಈ ಸದನದಲ್ಲಿ ಬೇಡಿಕೆಗಳನ್ನು ಮಂಡಿಸುವಾಗ ಇರುವುದಿಲ್ಲ. ಇವತ್ತು 25 ಬೇಡಿಕೆಗಳು ಸದನದಲ್ಲಿದೆ, ಮಂಡಿಸುವುದಕ್ಕೆ ಯಾರು ಇರುವುದಿಲ್ಲ. ಇದಾದ ಮೇಲೆ ತಾವು ಬೇಡಿಕೆಗಳ ಬಗ್ಗೆ ಚರ್ಚೆಗೆ ಕರೆಯಿರಿ, ಉಳಿದಂತಹ 40 ಬೇಡಿಕೆಗಳನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕು, ಎಂದು ಹೇಳಿ ಯಾರ್ಯಾರು ಪ್ರಸ್ತಾಪವನ್ನು ಮಂಡಿಸುತ್ತಾರೋ ನೋಡೋಣ. ಹೀಗೆ ಸದನವನ್ನು ಇಷ್ಟು ಹಗುರವಾಗಿ ತೆಗೆದುಕೊಂಡರೆ, ನಾವು ಏನು ಉತ್ತರವನ್ನು ಕೊಡಬೇಕು. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಾವು ಒಬ್ಬರೋಬ್ಬರು ಜಗಳವನ್ನು, ಕುಸ್ತಿಯನ್ನು ಮಾಡುವುದಕ್ಕಾಗುತ್ತದೆಯೇ? ನಾವು ಮಾತಿನಿಂದಲೂ, ಸೌಜನ್ಯದಿಂದಲೂ, ರಿಕ್ವೆಸ್ಟ್ ಮಾಡಿಕೊಂಡು ಹೇಳಬಹುದು. ರೂಲ್ಸ್ ಆಫ್ ಪ್ರೋಜಿಸರ್ ಪ್ರಕಾರ ಚರ್ಚೆ ಮಾಡಬಹುದು, ಇದು ಯಾವುದಕ್ಕೂ ಗೌರವಿಲ್ಲ,, ಎಂದರೆ ಈ ರೂಲ್ಸ್ ಮತ್ತು ರೆಗ್ಯುಲೇಶನ್ ಏಕೆ ಬೇಕು, ನಾವು ಏಕೆ ಸದನವನ್ನು ಸೇರಬೇಕು. ಮಾನ್ಯ ಅಧ್ಯಕ್ಷರೆ, ತಾವು ಇದರ ಬಗ್ಗೆ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು, ಈ ರೀತಿಯಾಗಿ ನಡವಳಿಕೆಯನ್ನು ಅವರು ಏತಕ್ಕೆ ಮಾಡುತ್ತಿದ್ದಾರೆ, ಈ ರೀತಿಯಾಗಿ ಹೇಳಿಕೆಯನ್ನು ಅವರು ಏತಕ್ಕಾಗಿ ಕೊಡುತ್ತಿದ್ದಾರೆ ಎನ್ನುವುದರ ಬಗೆಗೆ ಅವರು ಸ್ಪಷ್ಟವಾದ ಹೇಳಿಕೆಗಳನ್ನು ಕೊಡಬೇಕು, ಅವರು ಈ ಸದನಕ್ಕೆ ಬಂದು ಈ ರೀತಿಯಾಗಿರುವುದು ಸರಿಯಿಲ್ಲವೆಂಬುದರ ಬಗ್ಗೆ ತಮ್ಮ ಮುಖಾಂತರ ಕ್ಷಮಾಯಾಚನೆಯನ್ನು ಕೇಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಅಧ್ಯಕ್ಷರೆ, ಸದನವು ಇಷ್ಟು ದಿವಸ ನಡೆದುಕೊಂಡು ಬಂದಿರುವ ಬಗ್ಗೆ ತಮಗೆ ಗೊತ್ತಿದೆ. ಕೃಷ್ಣಾ, ಕಾವೇರಿ

ವಿಚಾರ ಇರಬಹುದು, ಈ ಸದನ ನಡೆಯುವಾಗ ಮತ್ತು ನಡೆಯದಿರುವಾಗ ಹಿಂದಿನ ಎಲ್ಲಾ ಮಾನ್ಯ ಮುಖ್ಯಮಂತ್ರಿಗಳು ಇಂತಹ ವಿಚಾರದಲ್ಲಿ ಯಾವುದೇ ಮಾತುಕತೆಯ ಬಗ್ಗೆ ಹೋಗಬೇಕಾದಾಗ, ಯಾವುದೇ ರಾಜ್ಯದ ಮುಖ್ಯಮಂತ್ರಿಗಳ ಜೊತೆಯಾಗಲಿ, ಅಥವಾ ದೆಹಲಿಯ ವರಿಷ್ಠರ ಜೊತೆಯಾಗಲಿ, ಪ್ರಧಾನಮಂತ್ರಿಗಳ ಜೊತೆಯಾಗಲಿ ಎಲ್ಲಿ ಹೋಗಬೇಕಾದರೂ ಸಹ ಅವರು ವಿರೋಧಪಕ್ಷದವರನ್ನು ಕರೆದು ಜೊತೆ ಮಾತನಾಡಿ ಅವರ ಸಲಹೆ ಮತ್ತು ಸಹಕಾರಗಳನ್ನು ತೆಗೆದುಕೊಂಡು ಬಂದಿರುವಂತಹ ವಿಚಾರ. ಇತ್ತೀಚೆಗೆ ಆ ಪ್ರಶ್ನೆಯು ಉದ್ಭವವಾಗುತ್ತಿಲ್ಲ. ಕೃಷ್ಣಾ ಮತ್ತು ಕಾವೇರಿಯ ಬಗ್ಗೆ ಮಾತನಾಡುತ್ತಿಲ್ಲ, ನಮ್ಮನ್ನು ಯಾರು ಕರೆಯುತ್ತಿಲ್ಲ, ಗಡಿ ಸಮಸ್ಯೆಯ ಬಗ್ಗೆ ಮಾತನಾಡುತ್ತಿಲ್ಲ, ನಮ್ಮನ್ನು ಯಾರು ಕರೆಯುತ್ತಿಲ್ಲ, ಗಡಿ ಸಮಸ್ಯೆ ಬಗ್ಗೆ ಮಾತನಾಡುತ್ತಿಲ್ಲ, ನೇರವಾಗಿ ಅವರೇ ಹೋಗಿ ಮಾತನಾಡಿಕೊಂಡು ಬರುತ್ತಾರೆ. ಆದರೆ ಸದನ ನಡೆಯುವಾಗ ಇದು ಬಹಳ ಪ್ರಾಮುಖ್ಯವಾದುದು, ಶಿಷ್ಟಾಚಾರ ಒಂದೇ ಇಲ್ಲ, ಇದು ಹಕ್ಕುಚ್ಯುತಿ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಾನು ನೇರವಾಗಿ ಹೇಳುತ್ತಿದ್ದೇನೆ, ಅವರಿಗೆ ಹುಷಾರಿಲ್ಲ ನಿಜ, ಅವರಿಗೆ ದೇವರು ಒಳ್ಳೆಯದನ್ನು ಮಾಡಲಿ. ಅವರು ಆರೋಗ್ಯವಾಗಿರಲಿ, ಆ ಸದನಕ್ಕೆ ಅವರು ಬರಲಿ. ಆದರೆ ಈ ಸದನದ ಪ್ರಶ್ನೆಯನ್ನು ಅವರು ಗಾಳಿಗೆ ತೂರಬಾರದು; ಈ ಸದನವನ್ನು ಕಡೆಗಾಣಿಸಬಾರದು. ಅವರು ಇಲ್ಲಿಗೆ ಬಂದ ತಕ್ಷಣ ಅವರ ಕೈಯಲ್ಲಿ ಆಗಲಿಲ್ಲವೆಂದರೆ ಸಂಬಂಧಪಟ್ಟ ಸಚಿವರಾದರೂ ಇವತ್ತಲ್ಲ, ತಾವು ಆವತ್ತೆ ಇದನ್ನು ಮಾಡಬೇಕಾಗಿತ್ತು. ತಾವೇ ಸ್ವತ: ಒಂದು ಹೇಳಿಕೆಯನ್ನು ಕೋಡಬೇಕಾಗಿತ್ತು. ಆ ಹೇಳಿಕೆಯನ್ನು ಕೊಟ್ಟಿಲ್ಲ, ಅಲ್ಲಿ ಏನು ನಡೆಯಿತು, ಏನು ಮಾತುಕತೆಯಾಯಿತು, ರಾಜ್ಯದ ಪ್ರಶ್ನೆ ಏನು? ಆಲಮಟ್ಟಿ ಬಗ್ಗೆ ಅವರ ನಿರ್ಧಾರವೇನು? ನಿಮ್ಮ ನಿರ್ಧಾರವೇನು? ನಮ್ಮ ನಿರ್ಧಾರವೇನು? ಇದರ ಬಗ್ಗೆ ಮಾತನಾಡಲಿಲ್ಲ. ಮತ್ತೊಂದು ಗುರುತರವಾದ ವಿಚಾರವೇನೆಂದರೆ ಗಡಿ ಸಮಸ್ಯೆಯ ಬಗ್ಗೆ ಇಲ್ಲಿ ಚರ್ಚೆ ಆಗಿಹೋಗಿದೆ; 14ನೇ ತಾರೀಖು ಎರಡು ರಾಜ್ಯದ ಮುಖ್ಯಮಂತ್ರಿಗಳು 'ನಾವು ಸಭೆ ಸೇರಬೇಕೆಂಬ' ತೀರ್ಮಾನಕ್ಕೆ ಬಂದಿದ್ದಾರೆ. ಈ ತೀರ್ಮಾನ ಏನು ಎನ್ನುವಂತದ್ದು ಎಂದರೆ ಇದು ಆಪಾಯಕಾರಿಯಾದ ಬೆಳವಣಿಗೆ ಎಂದು ನಾನು ಹೇಳಬೇಕಾಗುತ್ತದೆ. ಈಗ ಎರಡು ರಾಜ್ಯದ ಮುಖ್ಯ ಮಂತ್ರಿಗಳು ಮಾತನಾಡುವಂತಹ ಪ್ರಶ್ನೆಯು ಉದ್ಭವವಾಗುವುದಿಲ್ಲ. ಮಹಾಜನ ವರದಿ ಅಂತಿಮ ಎಂದು ಹೇಳಿದ ಮೇಲೆ ಮಾತುಕತೆ ಇಲ್ಲ, ಮಹಾಜನ ವರದಿಯನ್ನು ಮಹಾರಾಷ್ಟ್ರದವರು ಒಪ್ಪುವುದಾದರೆ ನಮಗೆ ಒಪ್ಪಿಗೆಯಾಗಿದೆ, ನಾವು ತೀರ್ಮಾನಕ್ಕೆ ಬರೋಣ, ಎಂದರೆ ಅದು ಒಂದು ಪಕ್ಷ, ಆದರೆ ಮಹಾಜನ ವರದಿಗೆ ಅವರ ಒಪ್ಪಿಗೆನೇ ಇಲ್ಲ. ಮಹಾಜನ ವರದಿ ಲೋಕಸಭೆಯ ಆಸ್ತಿಯಾಗಿ ಕುಳಿತಿದೆ. ಲೋಕಸಭೆಯು ಮಹಾಜನ್ ವರದಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಅವರು ಮತ್ತೊಂದು ಕಡೆ ಆ ವರದಿಯನ್ನು ತಿರಸ್ಕರಿಸಿದಾಗ ಮಾವು ಮಾತುಕತೆಯಾಡುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. ಆದ್ದರಿಂದ ಈ ಗಡಿ ಸಮಸ್ಯೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಗೆ ಹೋಗತಕ್ಕಂಥಾದ್ದರಿಂದ

2.10 ಪಿ.ಎಂ.

ಕರ್ನಾಟಕಕ್ಕೆ ಅಪಾಯ ಇದೆ. ಹಾಗೂ ಸಮಸ್ತ ಕನ್ನಡಿಗರಿಗೆ ಅಪಾಯ ಇದೆ. ಕರ್ನಾಟಕದ ಈ ಗಡಿ ಸಮಸ್ಯೆ ತೀವ್ರವಾದಂಥ ಹೊಡೆತ ಬೀಳುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ ಎರಡು ಸಮಸ್ಯೆಗಳ ಬಗ್ಗೆ ಅವರು ಹೇಳಬೇಕು. ಒಂದು, ನೀರಾವರಿ ಬಗ್ಗೆ ಹೇಳಲಿ; ಮತ್ತೊಂದು ಗಡಿ ಸಮಸ್ಯೆ ಬಗ್ಗೆ ಸರ್ಕಾರದ ನಿರ್ಧಾರ ಏನು ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ತಿಳಿಸುತ್ತಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ (ಮಾನ್ಯ ಬೃಹತ್ ನೀರಾವರಿ ಮಂತ್ರಿಯವರು) :— ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು 'ಈ ಸದನವನ್ನು ಬಹಳ ಹಗುರವಾಗಿ ಕಂಡುಕೊಂಡಿದ್ದೀರಿ; ಈ ಸದನಕ್ಕೆ ಸರಿಯಾದ ಮಾಹಿತಿಗಳನ್ನು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ಖಾರವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಮುಂಬೈಗೆ ಹೋಗುವುದಕ್ಕೆ ಮುಂದೆ ಈ ಸದನಕ್ಕೆ ಬಂದು ಈ ಸದನದಲ್ಲಿ ತಿಳಿಸಿ, ನಾವು ಹೋಗಿ ಚರ್ಚೆ ಮಾಡಿದನಂತರ ಅಲ್ಲಿ ಚರ್ಚೆಗೆ ಬಂದಿದ್ದನ್ನು ನಾನು ತಿಳಿಸುತ್ತೇನೆ ಎಂದು ಹೇಳಿ ಸದನದ ಒಪ್ಪಿಗೆಯನ್ನು ಪಡೆದುಕೊಂಡೇ ಹೋಗಿದ್ದಾರೆ ಎನ್ನತಕ್ಕ ಮಾಹಿತಿ ಇರತಕ್ಕದ್ದು ಇದೆ. ತಮಗೆ ಜ್ಞಾಪಕ ಇರಬೇಕು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಸಂದರ್ಭದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮುಂಬಯಿಗೆ ಹೋಗುವುದಕ್ಕೆ ಮುಂಚೆ ಸದನಕ್ಕೆ ಬಂದು ಹೇಳಿ ಹೋಗಿದ್ದಾರೆ. ಏಕೆಂದರೆ ನಾವು 29-30ಕ್ಕೆ ಹಾಗದ ಬರೆದೆವು. 30ನೇ ತಾರೀಖು ಸಾಯಂಕಾಲ ಒಂದನೇ ತಾರೀಖಿಗೆ ಟೈಮ್ ಕೊಟ್ಟರು. ಒಂದು ದಿವಸದೊಳಗೆ ಹೋಗಬೇಕಿತ್ತು. ಆ ತುರ್ತು ಪರಿಸ್ಥಿತಿಯ ಒಳಗಡೆ ಕಾಲ ಇಲ್ಲದೇ ಇರತಕ್ಕಂಥ ಹಿನ್ನಲೆಯಲ್ಲಿ, ಈ ವಿಚಾರ ಕೂಡ ಅಷ್ಟೇ ಅರ್ಜೆಂಟ್ ಇದ್ದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸದನಕ್ಕೆ ಬಂದು ಹೇಳಿ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಅವರು ಅಲ್ಲಿಂದ ಬಂದ ತಕ್ಷಣ ವಿರೋಧ ಪಕ್ಷಗಳ ಮುಖಂಡರನ್ನು ಕರೆಯಬಹುದಾಗಿತ್ತು. ಅವರು ಬಂದು ಎರಡು ದಿವಸ ಆಗಿದೆ.

ಶ್ರೀ ಕೆ.ಎನ್. ನಾಗೇಗೌಡ :— ಒಂದು ನಿಮಿಷ ಕೇಳಿ, ಒಂದನೇ ತಾರೀಖು ಮಾತನಾಡಿದ ತಕ್ಷಣವೇ ಆ ದಿನ ಸಾಯುಂಕಾಲ ನಾನು ಮತ್ತು ಮಾನ್ಯ ಗೃಹ ಸಚಿವರು ವಾಪಸ್ಸು ಬಂದಿದ್ದೇವೆ. ಎರಡನೇ ತಾರೀಖು ಬೆಳಿಗ್ಗೆ ಈ ಸದನಕ್ಕೆ ಬಂದು ಅವರು ವಿಷಯ ಎತ್ತಿದ ತಕ್ಷಣ ಬೇಡ ಅಂತ ಹೇಳಬಾರದು ಎಂದು ಹೇಳಿ, ಸುಮ್ಮೋಮ್ಮೊಟೋ ಮಾಡಿದರೂ ಒಂದೇ; ವಿರೋಧ ಪಕ್ಷದ ನಾಯಕರು ಕೇಳಿದಾಗ ಹೇಳಿದರೂ ಒಂದೇ. ಅವರು ಕೇಳಿದ ಪ್ರಶ್ನೆಗೆ ಆವತ್ತು ನಡೆದಂಥ ನಡವಳಿಕೆಗಳನ್ನು ಒಪ್ಪುರಿಗಿ ಮತ್ತು ಆಲಮಟ್ಟಿ ಬಗ್ಗೆ ಏನು ನಡೆಯಿತು ಎನ್ನತಕ್ಕಂಥ ಸಂಬಂಧಪಟ್ಟು ನೀರಾವರಿ ಮಂತ್ರಿಯಾಗಿ ನಾನು

ಸದನದಲ್ಲಿ ಹೇಳಿದ ಮೇಲೆ ಏನೂ ಮಾಹಿತಿ ಕೊಟ್ಟಿಲ್ಲ, ಯಾವುದೇ ವಿಚಾರ ಪ್ರಸ್ತಾಪ ಮಾಡಲಿಲ್ಲ, ಈ ಸದನವನ್ನು ಬಹಳ ಕಡೆಗಣಿಸಿದ್ದಾರೆ ಎಂದು ಹೇಳತಕ್ಕಂಥಾದ್ದು ಸತ್ಯಕ್ಕೆ ದೂರವಾದ ವಿಚಾರ. ಈ ಸದನದ ರೆಕಾರ್ಡ್ಸ್ ಇದೆ, ಈ ಸದನದಲ್ಲಿ ಮಾತನಾಡಿರತಕ್ಕಂಥಾದ್ದು ಇದೆ. ಈ ಸದನದಲ್ಲಿ ಮತ್ತೆ ಪ್ರಶ್ನೆಯನ್ನು ಕೂಡ ಕೇಳಿದ್ದಾರೆ. ಆ ಹಿನ್ನಲೆಯ ಒಳಗಡೆ ನೀವು ಹೇಳಲಿಲ್ಲ ಅಂತ ಹೇಳಿದರೆ ಅದು ಸರಿಯಾದುದು ಅಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ಇಲಾಖೆಯ ಮಂತ್ರಿಯಾಗಿ, ಗೃಹಮಂತ್ರಿಯಾಗಿ ಅವರು ಕೂಡ ಗಡಿ ವಾಚಾರದಲ್ಲಿ ಮತ್ತು ಅಲ್ಲಿ ನಡೆದಂಥ ಮಾತುಕತೆ ವಿಚಾರ ತಿಳಿಸಿದ್ದಾರೆ. ಕೊನೆಗೆ ಒಂದು ಮಾತನ್ನು ಹೇಳಿದ್ದೀವಿ. ಹತ್ತನೆ ತಾರೀಕಿನ ಒಳಗಡೆ ಇನ್ನು ಮೂರು-ನಾಲ್ಕು ದಿವಸಗಳಲ್ಲಿ ಎಲ್ಲ ವಿರೋಧ ಪಕ್ಷ ಮತ್ತು ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಮುಖ್ಯಮಂತ್ರಿಗಳು ಕರೆದು... ಇದು ಗಡಿ ವಿಚಾರ ಮಾತಾಡಿಲ್ಲ. ಗಡಿಯಲ್ಲಿ ಬರತಕ್ಕಂಥ ಮಾತನ್ನು ಮಾನ್ಯ ಗೃಹ ಸಚಿವರು ಅವತ್ತು ತಿಳಿಸಿದ್ದಾರೆ. ಹಾಗಾದರೆ ಮಹಾಜನ ವರದಿಯನ್ನು ಒಪ್ಪಿಕೊಂಡಿದ್ದೀರಾ ಎಂದು ತಾವು ಕೇಳಿದ್ದೀರಿ. ಅದರ ಅರ್ಥವನ್ನು ನೀವೇ ಅರ್ಥೈಸಿಕೊಳ್ಳಿ. ಅದರೆ ಗಡಿಯಲ್ಲಿ ಬರತಕ್ಕಂಥ ಹಳ್ಳಿಗಳ ಸಮಸ್ಯೆಗಳು ಬಹಳ ಇವೆ. ಅದರ ಬಗ್ಗೆ ನಾವು ಮಾತನಾಡಿದ್ದೇವೆ ಎಂದು ಹೇಳಿದ್ದೇವೆ. ದಯವಿಟ್ಟು ಒಂದು ಮಾತನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಇಬ್ಬರಿಗೂ ನಾನು ತಿಳಿಸುವದಕ್ಕೆ ಇಚ್ಛಿಪಡಿತ್ತೇನೆ. ಇವತ್ತು ಬೆಳಿಗ್ಗೆ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳ ಜತೆ ಮಾತನಾಡಿದ್ದೇನೆ. ಇನ್ನು ಎರಡು-ಮೂರ-ನಾಲ್ಕು ದಿವಸಗಳಲ್ಲಿ ನಾವು ಎಲ್ಲ ರಾಜಕೀಯ ಪಕ್ಷಗಳ ಮುಖಂಡರುಗಳನ್ನು ಕರೆದು ಅವರ ಜೊತೆ ಮಾತನಾಡಿ ಅದು ಗಡಿ ವಿಚಾರ ಇರಲಿ, ಹಿಪ್ಪರಗಿ ವಿಚಾರ ಇರಲಿ, ಅಲಮಟ್ಟಿ ವಿಚಾರ ಇರಲಿ ಕುಳಿತು ಮಾತನಾಡುತ್ತೇವೆ ಎನ್ನತಕ್ಕಂಥ ಮಾತನ್ನು ಮತ್ತೊಂದು ಸಾರಿ ನಾನು ಮುಖ್ಯಮಂತ್ರಿಗಳ ಪರವಾಗಿ ಈ ಸದನಕ್ಕೆ ತಿಳಿಸುತ್ತಾ, ಇದರೊಳಗೆ ಯಾವುದೇ ಕಾರಣಕ್ಕೆ ಮಾನ್ಯ ಮುಖ್ಯಮಂತ್ರಿಗಳು ಈ ಸದನದ ಗೌರವ ಕಳೆದಿಲ್ಲ, ಎಲ್ಲವನ್ನೂ ಕೂಡ ಈ ಸದನದ ಮಾಹಿತಿಗೆ ತಂದಿದ್ದೇವೆ ಎಂದು ಹೇಳುತ್ತೇನೆ. ಮತ್ತೆ ಮಾನ್ಯ ಖರ್ಗೆಯವರು ಪತ್ರಿಕೆಗಳಲ್ಲಿ ಒಂದು ಮಾತನ್ನು ಹೇಳಿರುತ್ತಾರೆ. ಹಿಪ್ಪರಗಿ ಕೆಲಸ ನಿಂತುಹೋಗಿದೆ, ಅಲಮಟ್ಟಿ ಕೆಲಸ ನಿಂತುಹೋಗಿದೆ ಎನ್ನತಕ್ಕಂಥ ಮಾತನ್ನು ಪದೆಪದೇ ಇವರ ಪಕ್ಷದ ಸಭೆಗಳಲ್ಲಿ ಹೇಳುತ್ತಾರೆ. ಎಲ್ಲೂ ಕೆಲಸ ನಿಂತಿಲ್ಲ. ಹಿಪ್ಪರಗಿ ಕೆಲಸ ನಿಂತಿಲ್ಲ, ಅಲಮಟ್ಟಿಯ ಕೆಲಸವೂ ನಿಂತಿಲ್ಲ. ಅಲಮಟ್ಟಿಯ ಕೆಲಸಗಳು ಸುಪ್ರೀಂ ಕೋರ್ಟಿನ ಡೈರೆಕ್ಷನ್ ಪ್ರಕಾರವೇ ನಡೆಯುತ್ತಿವೆ. ಹಿಪ್ಪರಗಿ ಬೇರೆ ಯಾವುದೇ ವಿಚಾರ ಇಲ್ಲ. ಹಿಪ್ಪರಗಿಗೆ ನಾವು ಬ್ಯಾರೇಜನ್ನು ಕಟ್ಟಿತ್ತಿದ್ದೇವೆ. ಆದರೆ ಕೆಲಸ ನಿಂತಿಲ್ಲ ಎನ್ನತಕ್ಕಂಥ ಮಾತನ್ನು ಸಭಾಧ್ಯಕ್ಷರ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಖರ್ಗೆಯವರಿಗೆ ಹೇಳುತ್ತಿದ್ದೇನೆ. ಪದೆಪದೇ ಅವರು ಜನರನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಕೆಲಸವನ್ನು ಮಾಡಬಾರದು ಎಂದು ಹೇಳಿ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇದು ಬಾಯಿ ಇದ್ದವರು ಬರಗಾಲದಲ್ಲೂ ಬದುಕಿದರು ಎಂದು ಹೇಳುತ್ತಾರಲ್ಲ, ಹಾಗೆ ಆಗಿದೆ. ಈಗ ತಾವೇ ಈ ಮಾತನ್ನು ಹೇಳಿದ್ದೀರಿ. ಬೇಕಾದರೆ ಕಡತ ತೆಗೆಸಿ ನೋಡಿ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ, ಇದರ ಬಗ್ಗೆ ಮಾತುಕತೆ ನಡೆದಿದ್ದರ ಬಗ್ಗೆ ಹೇಳಿಕೆಯನ್ನು ಕೊಡುತ್ತಾರೆ ಎಂದೂ ಹೇಳಿದ್ದು, ಇದಕ್ಕೆ ಮಾನ್ಯ ಪ್ರಕಾಶ್‌ರವರು ಸಾಕ್ಷಿ ಇದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ :— ಹೇಳಿಕೆ ಕೊಡುವುದಿಲ್ಲ ಎಂದು ಹೇಳಿಲ್ಲ, ಕೊಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇಲ್ಲ ಹೇಳುವದಕ್ಕೆ ಮಂಚಿ ತಾವು ಹೊರಗಡೆ ಏನೂ ಹೇಳಿದ್ದೀರಿ? "ನಾನು ಮಹಾರಾಷ್ಟ್ರ ಮುಖ್ಯಂತ್ರಿಗಳ ಜತೆ ಮಾತನಾಡಿದಾಗ ಆಲಮಟ್ಟಿ ಆಣೆಕಟ್ಟು ಮತ್ತು ಹಿಪ್ಪರಗಿ ಬ್ಯಾರೇಜ್ ಬಗ್ಗೆ ಆಂಧ್ರ ಪ್ರದೇಶ ವಿರೋಧ ವ್ಯಕ್ತಪಡಿಸಲು ಕಾರಣಗಳು ಇರಬಹುದು. ಆದರೇ ಈ ಬಗ್ಗೆ ನೀವು ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯಕ್ಕೆ ಹೋಗುವುದಕ್ಕೆ ಕಾರಣ ಇರಲಿಲ್ಲ ಎಂದು ನಾನು ಅವರಿಗೆ ತಿಳಿಸಿದ್ದೆ. ಆಗ ಅವರು ತಮ್ಮ ಭೂಮಿ ಮುಳುಗಡೆಯಾಗುವ ವಿಚಾರವನ್ನು ಪ್ರಸ್ತಾಪಿಸಿದರು." ಮುಂದೆ ಏನು ಹೇಳುತ್ತಾರೆ ಎಂದರೆ..... "ಈಗ ನಡೆಯುತ್ತಿರುವ ಜಂಟಿ ಸಮೀಕ್ಷೆ ಸುಮಾರು ಪ್ರತಿಶತ 80 ರಷ್ಟು ಮುಗಿದಿದೆ. ಇನ್ನು ಮೂರು-ನಾಲ್ಕು ತಿಂಗಳಲ್ಲಿ ಸಮೀಕ್ಷೆ ಮುಗಿಯುತ್ತದೆ. ಅಲ್ಲಿಯವರೆಗೆ ನಾವು ಕಾಯುತ್ತೇವೆ" ಎಂದು ಹೇಳಿದ್ದಾರೆ. ಅಂದರೆ ಇದನ್ನು ಎತ್ತರ ಮಾಡತಕ್ಕಂಥ ಕೆಲಸವನ್ನು ಕೂಡ ನಾವು ನಿಲ್ಲಿಸಿದ್ದೇವೆ ಎನ್ನತಕ್ಕಂಥ ಅರ್ಥ ಇದು. ಎರಡನೇಯದು, ಸುಪ್ರೀ ಕೋರ್ಟಿನಲ್ಲಿ ಸ್ಟೇಟಸ್ಕೋ ಎಂದು ಹೇಳಿರತಕ್ಕದ್ದು ತಮಗೆ ಗೊತ್ತಿದೆ. ಅಂದಾಗ ಒಂದು ಕಡೆ ಹೇಳುತ್ತೀರಿ ಕೆಲಸ ನಡೆದಿದೆ ಎಂದು. ಇನ್ನೊಂದು ಕಡೆ ಸುಪ್ರೀಂ ಕೋರ್ಟಿನದ್ದು 'ಸ್ಟೇಟಸ್ಕೋ' ಎನ್ನತಕ್ಕಂಥ ಆರ್ಡರ್ ಕೂಡ ಇದೆ ಎನ್ನತಕ್ಕದನ್ನು ಸಹ ತಾವೇ ಹೇಳುತ್ತೀರಿ. ಈಗ ಯಾವ ಭಾಷೆಯಲ್ಲಿ ನಾವು ಹೇಳಬೇಕು? ಇದು ನಡೆದಿದೆ ಎಂದರೆ ಆಲಮಟ್ಟಿಗೆ 26 ಶಟರ್‌ಗಳನ್ನು ಹಾಕಿದ್ದೀರಾ? ಈ ಕೆಲಸ ನಡೆದಿದೆ ಎಂದರೆ 26 ಗೇಟ್‌ಗಳಲ್ಲಿ ಎಷ್ಟು ಗೇಟ್‌ಗಳಿಗೆ ಶಟರ್ ಹಾಕಿ ನೀರು ನಿಲಗ್ಲಿಸತಕ್ಕಂಥಾದ್ದನ್ನು ಮಾಡ್ದಿದ್ದೀರಿ? ಹಿಪ್ಪರಗಿ ಬ್ಯಾರೇಜ್ ಕೆಲಸ ಈಗ ನಿಧಾನಗತಿಯಿಂದ ನಡೆದಿದೆ.

ಗೊಂದಲ

ಶ್ರೀ ಕೆ.ಎನ್. ನಾಗೇಗೌಡ :— ಇವತ್ತಿನ 'ಪ್ರಜಾವಾಣಿ' ಪತ್ರಿಕೆಯನ್ನು ತೆಗೆದುನೋಡಿ. ತಮ್ಮ ಪಕ್ಷದ ಸಭೆಯಲ್ಲಿ 'ಕೆಲಸ ನಿಂತೇಹೋಗಿದೆ' ಎಂದು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸ್ವಲ್ಪ ಕೇಳಿ. ನಿಂತು ಹೋಗಿದೆ ಎಂದರೆ ಈ ವಿಚಾರದಲ್ಲಿ ಹೇಳಿದ್ದು. ಈಗ ನೀವು ಹೇಳಿರುವಂತೆ ಆಲಮಟ್ಟಿ ಕೆಲಸ ನಡೆದಿದೆಯಾ?

ಗೇಟ್ ಹಾಕುವುದಕ್ಕೆ ನಿಮಗೆ ಅಧಿಕಾರ ಇಲ್ಲ. ಸುಮ್ಮನೆ ಕೆಲಸ ನಡೆದಿದೆ ಎಂದು ಯಾಕೆ ಹೇಳುತ್ತೀರಿ? ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ನಾವು ತಪ್ಪು ದಾರಿಗೆ ಎಳೆಯುತ್ತಿಲ್ಲ. ತಪ್ಪು ದಾರಿಗೆ ಎಳೆಯತಕ್ಕಂಥವರು ಇವರು. ಮತ್ತೆ ಪದೆಪದೇ ಎಲ್ಲ ಕಡೆ ಹೇಳಿಕೆ ಕೊಡುತ್ತೀರಿ. ಇಲ್ಲಿ ಬಂದು ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಏನಾಗಿತ್ತು? ಚನ್ನರಾಯಪಟ್ಟಣದಲ್ಲಿ ಹೋಗಿ ಮಾತನಾಡಬಹುದು. ಬೆಂಗಳೂರುನಲ್ಲಿ ಪತ್ರಕರ್ತರ ಜೊತೆಯಲ್ಲಿ ಮಾತನಾಡಬಹುದು. ಆದರೆ ಸದನದಲ್ಲಿ ಒಂದು ಹೇಳಿಕೆ ಕೊಡುವುದಕ್ಕೆ ಆಗುವುದಿಲ್ಲ!

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದರಲ್ಲಿ ಅರ್ಥ ಇಲ್ಲವೆಂದು ನಾನು ಹೇಳುವುದಿಲ್ಲ....

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾವೇನೂ ಅವರ ಆರೋಗ್ಯ ಕೆಡಿಸಬೇಕು ಎಂದು ಅಲ್ಲ. ಆದರೆ ಈ ವಿರೋಧ ಪಕ್ಷದಲ್ಲಿರತಕ್ಕಂಥ ಸದಸ್ಯರು ಈ ಸರ್ಕಾರಕ್ಕೆ ಸಹಕಾರ ಮಾಡಿದಷ್ಟು ಮತ್ತೆ ಯಾರು ಮಾಡಿಲ್ಲ. ಅನೇಕಸಾರಿ ನಮ್ಮ ಕರ್ತವ್ಯದಲ್ಲಿ ಲೋಪವಾಗಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಆರೋಗ್ಯ ಸರಿಯಿಲ್ಲ, ಅವರು ಇವತ್ತು ಬರುವುದಿಲ್ಲ, ಅನೇಕ ಸಾರಿ ನೀವು ಉತ್ತರವನ್ನು ಕೊಡುವುದಿಲ್ಲ, ಹಾಜರಾತಿ ಇರುವುದಿಲ್ಲ. ನಾವೇನು ಇಲ್ಲಿ ಹೊಡೆದಾಡುವುದಕ್ಕೆ ಆಗುತ್ತದೆಯಾ? ರಣರಂಗ ಮಾಡುವುದಕ್ಕೆ ಆಗುತ್ತದೆಯಾ? ಸುಮ್ಮನೆ ಈಗ ತಪ್ಪಾಗಿದ್ದನ್ನು ಒಪ್ಪಿಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ ಒಂದು ಮಾತು, ನಾನು ನಿಜವಾಗಿ ಒಪ್ಪಿಕೊಳ್ಳುತ್ತೇನೆ. ಅವರ ಆರೋಗ್ಯ ನಿನ್ನೆವರೆಗೆ ಚೆನ್ನಾಗಿ ಇತ್ತು. ನಿನ್ನೆ ಸ್ವಲ್ಪ ಆರೋಗ್ಯ ಕೆಟ್ಟಿದೆ. ಅವರು ಬಂದ ತಕ್ಷಣ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿಸುತ್ತೇವೆ ಎಂದು ಹೇಳಿದ್ದೇನೆ. ಸ್ಟೇಟ್‌ಮೆಂಟ್ ಮಾಡಿಸುವುದಿಲ್ಲ ಅಂತ ಹೇಳಿಲ್ಲ. ಎಲ್ಲ ಸಂಪೂರ್ಣ ಅಫಿಷಿಯಲ್ ಮಾಹಿತಿಯನ್ನು ಕೊಟ್ಟಿದ್ದೇವೆ. ಆದರೆ ಉಳಿದಿರತಕ್ಕಥಾದ್ದು ಅವರು ಸಾಂಪ್ರದಾಯಿಕವಾಗಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಯಾವುದೇ ಮುಖ್ಯಮಂತ್ರಿಗಳು ಎಲ್ಲಿಯಾದರೂ ಹೊರಗಡೆ ಪತ್ರಿಕೆಯವರು ಕೇಳಿದಾಗ ಹೇಳುವುದಕ್ಕೆ ಆಗುವುದಿಲ್ಲ ಎಂದು ಹೇಳಲಾಗುತ್ತದೆಯೇ?

ಅಧ್ಯಕ್ಷರು :— ಈಗ ಹೀಗೆ ಮಾಡೋಣ; ಈ ಸದನದ ಎಲ್ಲ ಗೌರವಾನ್ವಿತ ಸದಸ್ಯರ ಆರೋಗ್ಯ ದೃಷ್ಟಿಯಿಂದ ಎಲ್ಲರೂ ಹೋಗಿ ಊಟ ಮಾಡಿಕೊಂಡು ಬನ್ನಿ.

ಶ್ರೀ ಎಂ.ಪಿ. ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ದಯಮಾಡಿ ಅರ್ಥಮಾಡಿಕೊಳ್ಳಬೇಕು; ಅವರು ಮುಂಬೈಯಿಂದ ಬಂದ ನಂತರ ಶನಿವಾರ ಮತ್ತು ಭಾನುವಾರ ಸದನ ಇರಲಿಲ್ಲ. ಆದ್ದರಿಂದ ಅವರು ಬರಲಿಕ್ಕೆ ಆಗಲಿಲ್ಲ. ಈ ದಿವಸ ಸೋಮವಾರ ಅವರು ಬಂದು ತಮ್ಮ ಹೇಳಿಕೆಯನ್ನು ಕೊಡುತ್ತಿದ್ದರು. ಭಾನುವಾರ ದಿವಸ ಅವರ ಆರೋಗ್ಯ ಚೆನ್ನಾಗಿಯೇ ಇತ್ತು. ಅವರು ಚನ್ನರಾಯಪಟ್ಟಣದಲ್ಲಿ ಪೂರ್ವ-

ನಿರ್ಧಾರಿತವಾದಂಥ ಕಾರ್ಯಕ್ರಮಕ್ಕೆ ಹೋಗಿದ್ದರು. ಆದರೆ ಅನಾರೋಗ್ಯದ ಕಾರಣ ಇವತ್ತು ಬಂದಿಲ್ಲ. ಈ ಪ್ರಶ್ನೆಯನ್ನು ಕೇಳಿದಂಥ ಸಂದರ್ಭದಲ್ಲಿ ಅದಕ್ಕೆ ಅನುಸಂಗಿತವಾಗಿ ಉತ್ತರವನ್ನು ಕೊಟ್ಟಿದ್ದಾರೆ. 'ಅಲ್ಲಿಯವರೆಗೆ ಕಾಯುತ್ತೇವೆ' ಎನ್ನತಕ್ಕಂಥ ಕೊನೆಯ ಮಾತನ್ನು ಏನು ವಿರೋಧ ಪಕ್ಷದ ನಾಯಕರು ಹೇಳಿದರು, ಅದರ ಅರ್ಥ ಏನೆಂದರೆ ನಾವು ಸುಪ್ರೀಂ ಕೋರ್ಟು ಜಡ್ಜ್‌ಮೆಂಟ್ ವಿಚಾರದಲ್ಲಿ, ಮತ್ತೊಂದರ ಪ್ರಶ್ನೆ ಅಲ್ಲ, ಮಹಾರಾಷ್ಟ್ರ ಸರ್ಕಾರದವರು ಈ ಜಂಟಿ ಸರ್ವೆ ಮಾಡತಕ್ಕಂಥ ವಿಷಯಗಳು ಬಂದಾಗ ಅಲ್ಲಿಯವರೆಗೆ ಕಾಯುತ್ತೇವೆ ಎಂದು. ಅವರು ಹೇಳಿರತಕ್ಕಂಥಾದ್ದು ಏನೆಂದರೆ ನಮ್ಮ ಕಡೆಯ ಜಮೀನು ಮುಳುಗಿಹೋಗುತ್ತಿದೆ. ಆ ಕಾರಣದಿಂದಾಗಿ....

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಪ್ರಕಾಶ್‌ರವರೇ, ಅದು ಹಾಗಲ್ಲ; ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಡೆ ಗಮನ ಕೊಡಬೇಕು. ಜುಲೈ 18ನೇ ತಾರೀಖು ಕಾನ್ಸ್‌ಟ್ಯೂಷನಲ್ ಬೆಂಚ್ ಮುಂದೆ ಪೂರಾ ಕೇಸ್ ಬರುತ್ತಿದೆ. 19ನೇ ತಾರೀಖು ಕೇಸ್ ಬಂದಿರುವಾಗ ಹಿಂದೆ ಅವರ ಏಪ್ರಿಲ್‌ನಲ್ಲಿ ಅಫಿಡವಿಟ್ ಹಾಕಿ ಮಾಡಿದ ಹಿನ್ನಲೆ ಒಳಗಡೆ, ಆಂಧ್ರ ಮತ್ತು ಮಹಾರಾಷ್ಟ್ರ ಎರಡು ಒಟ್ಟಿಗೆ ತಕರಾರು ಎತ್ತಿದ ಹಿನ್ನಲೆ ಒಳಗಡೆ ನೀವು ಎಂದೂ ಕೂಡ 25 ವರ್ಷಗಳಿಂದ ಮಹಾರಾಷ್ಟ್ರ ಕರ್ನಾಟಕಕ್ಕೆ ಸಹಾಯ ಮಾಡಿಕೊಂಡು ಬಂದಿದೆ. ನಾವು ನಿಮಗೆ ಸಹಾಯ ಮಾಡಿಕೊಂಡು ಬಂದಿದ್ದೇವೆ. ಪರಸ್ಪರ ಅರ್ಥ ಮಾಡಿಕೊಳ್ಳುವಿಕೆ ಚೆನ್ನಾಗಿ ಇದೆ. ಈ ಸಬ್‌ಮರ್ಜಿಂಗ್ ಪಾರ್ಟ್‌ನಲ್ಲಿ ಸರ್ವೆ ನಡೆಯುತ್ತಿದೆ. ಈ ಹಿನ್ನಲೆಯಲ್ಲಿ ಜುಲೈ 19 ನೇ ತಾರೀಖು ನೀವು ಕೋರ್ಟಿನಲ್ಲಿ ಬರುವಾಗ ತಕರಾರು ಹಾಕಬೇಡಿ. Kindly co-operate until the survey ends ಅಂತ ನಾವು ಹೇಳಿದೆವು. ಆಗ ಅವರು ಹೇಳಿದರು ಜಾಯಿಂಟ್ ಸರ್ವೆ 80 ಭಾಗ ಮುಗಿದಿರುವುದರಿಂದ ಇನ್ನು 20 ಭಾಗ ಮುಗಿಯುವದಕ್ಕೆ ಎರಡು-ಮೂರು ತಿಂಗಳು ಆಗುವುದಾದರೆ ನಾವು ಯಾವುದೇ ಆದಂಥ ಅಫಿಷಿಯಲ್ ತಕರಾರುಗಳನ್ನು ಅಲ್ಲಿ ಹಾಕಿಕೊಂಡು ಕೋರ್ಟಿನಲ್ಲಿ ನಾವು ವಾದ ಮಾಡುವುದಿಲ್ಲ ನಮ್ಮ ನಿಮ್ಮಲ್ಲಿ ಅಂಡರ್‌ಸ್ಟೇಡಿಂಗ್ ಇರಲಿ, ಸರ್ವೆ ಬಂದಮೇಲೆ ನಾವು ತೀರ್ಮಾನ ಮಾಡುತ್ತೇವೆ ಎನ್ನತಕ್ಕಂಥ ಹಿನ್ನಲೆಯೊಳಗಡೆ ಹೇಳಿದ್ದಾರೆಯೇ ವಿನಹ ಬೇರೆ ಏನೂ ಅಲ್ಲ. ಆಮೇಲೆ ಅವರು 26ನೇ ಗೇಟ್ ಬಗ್ಗೆ ಹೇಳಿದರು. ತಾವು ಇನ್ನೊಂದು ಸಾರಿ ಸ್ಟೇಟೀಸ್ಕೊ ಪಾಯಿಂಟ್ ಬಗ್ಗೆ ಹೇಳಿದಿರಿ. ಆ ಸ್ಟೇಟಿಸ್ಕೋ ಪಾಯಿಂಟ್ ಹೀಗಿದೆ. ಇಂಟೀರಿಯಂ ಆರ್ಡರಿನಲ್ಲಿ ಸೆಲೆಟನ್ ವರ್ಕ್ ಮಾಡಬೇಕೆಂದು ಇದೆ. ಆ ಇಂಟೀರಿಯಂ ಆರ್ಡರ್ ಪ್ರಕಾರ 26ರ ಫೇರ್ ವರ್ಕ್ ಮುಗಿದಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :— ಮಾನ್ಯ ಮುಖ್ಯಮಂತ್ರಿಯವರು ಬಾಂಬೆಗೆ ಹೋಗುವುದಕ್ಕೆ ಮುಂದೆ ಖುದ್ದಾಗಿ ಬಂದು ಹಿಪ್ಪರಗಿ ಬ್ಯಾರೇಜನ್ನು ಪರಿವೀಕ್ಷಣೆ ಮಾಡಿ ನಂತರ ಬಾಂಬೆಗೆ ಹೋಗಿದ್ದಾರೆ. ಆ ಕೆಲಸ ನಿಲ್ಲಿಸುವುದಿಲ್ಲವೆಂಬುದನ್ನು ಪುನ: ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಎ. ಸುರೇಶ್ ಕುಮಾರ್ :— ಚನ್ನರಾಯಪಟ್ಟಣಕ್ಕೆ ಹೋದಾಗ ಅವರಿಗೆ ಜ್ವರ ಬಂದಿದ್ದಕ್ಕೆ ಕಾರಣ ಏನು ಎಂಬುದನ್ನು ಹೇಳಬಹುದೇ.

ಅಧ್ಯಕ್ಷರು :— ಜ್ವರ ಬಂದಿತ್ತು ಎಂದು ಡಾ: ಮಹದೇವ್ ಸರ್ಟಿಫೈ ಮಾಡಿದ್ದಾರೆ.

ಶ್ರೀ ಮಾಟಾಳ್ ನಾಗರಾಜ್ :— ಅವರ ಆರೋಗ್ಯವನ್ನು ಕಾಪಾಡುವುದಕ್ಕೆ ಇವರೆಲ್ಲಾ ಕಾರಣರಾಗಿರಬೇಕಲ್ಲವೇ. ಅವರ ಆರೋಗ್ಯ ಚೆನ್ನಾಗಿರಬೇಕಾದರೆ, ನೀವೆಲ್ಲಾ ಅವರು ಸುತ್ತಮುತ್ತ ಇದ್ದು, ಅವರು ಆರೋಗ್ಯವನ್ನು ಕಾಪಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಅವರಿಗೆ ರಾಜಕೀಯ ಜ್ವರ ಅಲ್ಲ, ಧೈರ್ಯಕವಾದ ಜ್ವರ ಬಂದಿದೆ.

ಅಧ್ಯಕ್ಷರು :— ತುಂಗಭದ್ರಾ ವಿಚಾರವನ್ನು ತಾವು ಹೇಳುವುದು ಮತ್ತು ಅವರು ಉತ್ತರ ಕೊಡುವುದು ಎಲ್ಲವನ್ನೂ 3 ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನನಗೆ ಗೊತ್ತಾಯಿತು, ನಿಮ್ಮದು ಇಷ್ಟೇ ಹಣೆಬರಹ! ನಾನು ಅದರ ಗೋಜಿಗೆ ಹೋಗುವುದಿಲ್ಲ. ಇವತ್ತೆಲ್ಲಾ ಜನರ ಮುಂದೆ ಹೋಗಿ ಹೇಳೋಣ ಬಿಡಿ. ತುಂಗಭದ್ರಾ ಎಡದಂಡೆ ಕಾಲುವೆ ಬ್ರೀಚ್ ಪದೇಪದೇ ಆಗುತ್ತಿದೆ. ಅದಕ್ಕೆ ರಿಪೇರಿ ಕೂಡ ಸರ್ಕಾರ ಅನೇಕ ಸಾರಿ ಮಾಡುತ್ತಲೇ ಇದೆ. ಈಗೇನಾಗಿದೆ ಎಂದರೆ, ಯಾವ ಅವಧಿಯಲ್ಲಿ ನೀವು ಅದನ್ನು ಪೂರ್ಣ ಮಾಡಬೇಕಾಗಿತ್ತೋ ಆ ಅವಧಿಯಲ್ಲಿ ತಾವು ಪೂರ್ಣ ಮಾಡಲಿಲ್ಲ. ಸಣ್ಣಪುಟ್ಟ ಕಂಟ್ರಾಕ್ಟ್ ಪೀಸ್-ವರ್ಕ್ ಎಂದು ಸುಮಾರು 50-60 ಜನರಿಗೆ ಕೊಟ್ಟಿರಬಹುದು. ಕೆಲಸ ಮುಗಿಯತಕ್ಕ ದೃಷ್ಟಿಯಿಂದ ನೀವು ಈ 50-60 ಜನರಿಗೆ ಆಯ್ಕೆ ಮಾಡಿದ್ದೀರಿ; ಇದನ್ನು ಯಾವ ರೀತಿಯಲ್ಲಿ ಆಯ್ಕೆ ಮಾಡಿದ್ದೀರೋ ಅದು ನನಗೆ ಗೊತ್ತಿಲ್ಲ. ಆದರೆ, ಜನರ ಅಭಿಪ್ರಾಯ ಏನೆಂದರೆ, ಈಗಾಗಲೇ ನೀವು ಹೆಚ್ಚಿನ ಹಣ ಕೊಡಬೇಕಾಗಿತ್ತು. ಆ ಹಣವನ್ನು ಕೂಡ ಕೊಡಲಿಲ್ಲ ಮತ್ತು ನಿಗದಿತವಾದ ಸಮಯದಲ್ಲಿ ಅದನ್ನು ರಿಪೇರಿ ಮಾಡಿಕೊಡತಕ್ಕಂಥ ಜವಾಬ್ದಾರಿ ನಿಮ್ಮದಿತ್ತು; ಇಲ್ಲಿಯವರೆಗೆ ಆ ಕೆಲಸವೂ ಮುಗಿದಿಲ್ಲ. ಅದಕ್ಕಾಗಿ ದಯವಿಟ್ಟು ಅದರ ಬಗ್ಗೆ ನೀವು ಎಷ್ಟು ಹಣವನ್ನು ಖರ್ಚುಮಾಡಿದ್ದೀರಿ, ಎಷ್ಟು ಜನ ಕಾಂಟ್ರಾಕ್ಟರಿಗೆ ಪೀಸ್ ವರ್ಕ್ ಬೇಸಿಸ್ ಮೇಲೆ ವಹಿಸಿಕೊಟ್ಟಿದ್ದೀರಿ. ಈ ಕೆಲಸ ಮುಗಿಯತಕ್ಕಂತಾದ್ದು ಯಾವಾಗ? ತಾವು ನೀರು ಬಿಡತಕ್ಕಂತಾದ್ದು ಯಾವಾಗ? ಅಲ್ಲಿನ ರೈತರಿಗೆ ತಾವು ಮಾಡತಕ್ಕ ಕೆಲಸ ಗೊತ್ತಾಗುವ ದೃಷ್ಟಿಯಿಂದ ದಯವಿಟ್ಟು ಇಷ್ಟು ಮಾತ್ರ ತಾವು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೇ, ಟೋಟಲ್ ಕಾಸ್ಟ್ ಆಫ್ ದಿ ಎಂಟೈರ್ ವರ್ಕ್ಸ್ 90 ಕೋಟಿ ರೂಪಾಯಿಗಳು ಇದೆ. ಈ ಅಧುನೀಕರಣದ ಸಂಪೂರ್ಣ ಅಂದಾಜು ವೆಚ್ಚ 90 ಕೋಟಿ ರೂಪಾಯಿಗಳು. 1999-2000 ವರ್ಷದಲ್ಲಿ 20 ಕೋಟಿ ರೂಪಾಯಿಗಳನ್ನು ಟ್ಯಾಕಲ್ ಮಾಡಬೇಕೆಂದು 1999 ಏಪ್ರಿಲ್ ಕೊನೆಯಿಂದ ಜುಲೈವರೆಗೆ ನೀರು ನಿಲ್ಲಿಸುವಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇಲ್ಲಿಯವರೆಗೆ ಸ್ಟೆಂಕ್ತನಿಂಗ್

ವರ್ಕ್, ಕೆನಾಲ್ ವರ್ಕ್ಸ್, ಎಂಬ್ಯಾಕ್ಮೆಂಟ್ ವರ್ಕ್ಸ್, ಲೈನಿಂಗ್ ವರ್ಕ್ಸ್ ಎಲ್ಲಾ ನಡೆಯುತ್ತಾ ಇವೆ. ಈ ವರ್ಕ್ ಕೊಡುವುದಕ್ಕೆ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ, ಹಣಕಾಸಿನ ಇಲಾಖೆಯ ಅಯುಕ್ತರ ಸದಸ್ಯತ್ವದಲ್ಲಿ, ಆ ಕ್ವಾಲಿಫೈಡ್ ಲಿಸ್ಟ್ ತರಿಸಿಕೊಂಡು, ಆ ಕ್ವಾಲಿಫೈಡ್ ಲಿಸ್ಟ್‌ನಲ್ಲಿ ಚೀಫ್ ಸೆಕ್ರೆಟರಿ ಅಧ್ಯಕ್ಷತೆಯಲ್ಲಿ ಕೊಡಬೇಕೆಂದು ಲಿಸ್ಟ್ ಮಾಡಿದ್ದೇವೆ. ವರ್ಕ್ ಫಾಸ್ಟ್ ಆಗಿ ಆಗಲಿ ಎಂದು, ಮಾನ್ಯ ಭಟ್ಟಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿ, ಚೀಫ್ ಇಂಜಿನಿಯರಿಂದ ಕ್ವಾಲಿಫೈಡ್ ಲಿಸ್ಟ್ ತರಿಸಿಕೊಂಡು ಒಬ್ಬನಿಗೆ ಒಂದು ಕೆಲಸ ಎನ್ನುವ ಆಧಾರದ ಮೇಲೆ, ಅವನ ಕ್ವಾಲಿಫಿಕೇಷನ್ ನೋಡಿ ಕೆಲಸ ಕೊಟ್ಟಿದ್ದೇವೆ. 20 ಕೋಟಿ ರೂಪಾಯಿಯಲ್ಲಿ ಇಲ್ಲಿಯವರೆಗೆ 8 ಕೋಟಿ ರೂಪಾಯಿಗಳು ಖರ್ಚಾಗಿದೆ. 30-6-99ರ ವರೆಗೆ 8 ಕೋಟಿ ರೂಪಾಯಿಗಳು ಖರ್ಚಾಗಿದೆ. ನಾವು ಹಣ ರಿಲೀಸ್ ಮಾಡಿರುವುದು 8 ಕೋಟಿ ರೂಪಾಯಿಗಳು. ಅಂದರೆ, ಈ 5 ದಿವಸ ಬಿಟ್ಟರೆ, ಆಪ್ ಟು ಡೇಟ್ ಖರ್ಚನ್ನು ನಾವು ಬಿಡುಗಡೆ ಮಾಡಿದ್ದೇವೆ. ಫಸ್ಟ್ ಆಗಸ್ಟ್‌ನಿಂದ ನೀರನ್ನು ರಿಲೀಸ್ ಮಾಡುತ್ತೇವೆ. ಈ ವರ್ಷದ 20 ಕೋಟಿಯಲ್ಲಿ 8 ಕೋಟಿಯನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ನೀರನ್ನು ಜುಲೈಗೆ ಕೊಡುತ್ತೇವೆಂದು ಹೇಳಿದ್ದೆವು, ಜುಲೈಗೆ ಕೊಡುವುದಕ್ಕಾಗುವುದಿಲ್ಲ. ಒಂದನೇ ಆಗಸ್ಟ್‌ಗೆ ನೀರನ್ನು ಬಿಡುತ್ತೇವೆ. ಅಂದರೆ, ಈ ವಿಷಯ 5-6 ದಿವಸದಲ್ಲಿ ಆಗುತ್ತದೆ. ಕಾರ್ಯಕ್ರಮದ ಪ್ರಕಾರ ಎಲ್ಲಾ ಕೆಲಸ ಆಗುತ್ತಾ ಇದೆ. ಕೆಲಸದ ಬಗ್ಗೆ ನಾವೇನು ಪ್ರೋಗ್ರಾಂ ಹಾಕಿಕೊಂಡಿದ್ದೇವೆ, ಅದರ ಪರ್ಕಾರ ಹೋಗುತ್ತಿದ್ದೇವೆ. ಜುಲೈ 20 ಆಫಮಾ 25ಕ್ಕೆ ಕೊಡಬೇಕೆಂದು ಮಾಡಿದ್ದವು. ಅದನ್ನು ಒಂದನೇ ಆಗಸ್ಟ್‌ಗೆ ರಿಲೀಸ್ ಮಾಡುವುದಕ್ಕೆ ನಾವು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಪ್ರೋಗ್ರಾಂ ಪ್ರಕಾರ ಎಲ್ಲಾ ಕೆಲಸ ನಡೆಯುತ್ತಾ ಇದೆ. ದುಡ್ಡಿನ ಕೊರತೆ ಇಲ್ಲ, ಯಾವ ಕೆಲಸವೂ ನಿಂತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಅವರ ಹೇಳಿಕೆ ಪ್ರಕಾರವೇ 20 ಕೋಟಿ ಖರ್ಚುಮಾಡಿ, ಫಸ್ಟ್ ಜುಲೈಗೆ ಈ ಕೆಲಸ ಮುಗಿಸಬೇಕಾಗಿತ್ತು, ಆದರೆ 20 ಕೋಟಿಯಲ್ಲಿ ಇಲ್ಲಿಯಲ್ಲಿ ಇಲ್ಲಿಯವರೆಗೆ 8 ಕೋಟಿ ಮಾತ್ರ ಖರ್ಚು ಮಾಡಿದ್ದಾರೆ. ಅಂದರೆ 50 ಪರ್ಸೆಂಟ್ ಹಣವನ್ನೂ ಖರ್ಚು ಮಾಡಿಲ್ಲ; ಇನ್ನುಳಿದ 12 ಕೋಟಿ ರೂಪಾಯಿಗಳನ್ನು ಹೀಮಲ 10-15 ದಿವಸಗಳಲ್ಲಿ ಖರ್ಚು ಮಾಡಿ, ನೀವು ಫಸ್ಟ್ ಆಗಸ್ಟ್‌ಗೆ ನೀರು ಬಿಡುವುದಕ್ಕಾಗುತ್ತದೆಯೇ? ಇದು ಸಾಧ್ಯವೇ? ನೀವು ವಿ.ಸಿ. ಕೆನಾಲ್‌ಗೆ ಏನು ಆಸಕ್ತಿ ತೆಗೆದುಕೊಳ್ಳುತ್ತೀರೋ, ಆ ಆಸಕ್ತಿಯನ್ನು ಇಲ್ಲಿಯೂ ತೆಗೆದುಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ :— ನಾನು ಹೇಳುತ್ತೇನೆ ಅದಕ್ಕಿಂತ ಜಾಸ್ತಿ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಅಲ್ಲಿ ಎಷ್ಟು ಆಸಕ್ತಿ ತೆಗೆದುಕೊಳ್ಳುತ್ತಾರೆಂದರೆ ಅಲ್ಲಿಗೆ ಸ್ವತ: ಹೋಗುತ್ತಾರೆ, ಸ್ವತ: ನೋಡುತ್ತಾರೆ; ಸ್ವತ: ಅಲಾಟ್ ಮಾಡುತ್ತಾರೆ. ಅದೇ ಕೆಲಸವನ್ನು ಇಲ್ಲೇಕೆ ಮಾಡಬಾರದು?

ಶ್ರೀ ಕೆ.ಎನ್. ನಾಗೇಗೌಡ :— ಅದು ನಮ್ಮ ಬೃಹತ್ ನೀರಾವರಿ ರಾಜ್ಯ ಸಚಿವರಾದ ಮಾನ್ಯ ನಾಗಪ್ಪ ಸಾಲೋನಿಯವರ ಕ್ಷೇತ್ರ, ಹಾಗೂ ಅವರ ಜಿಲ್ಲೆ. ಅವರು ಇಲ್ಲಿಗೆ ಕಳೆದ ಒಂದೂವರೆ ತಿಂಗಳಿಂದ ಆ ಸ್ಥಳದಲ್ಲೇ ಕ್ಯಾಂಪ್ ಮಾಡಿದ್ದಾರೆ. ನಮಗೆ ಇದರ ಸಿರಿಯಸ್‌ನೆಸ್ ಏನಿದೆ, ಅದು ಗೊತ್ತಿದೆ. ಬಿಲ್ ಮಾಡಿರುವುದು ಯಾವುದು ಎಂದರೆ, ಯಾವ ಕೆಲಸ ಪೂರ್ಣವಾಗಿದೆ, ಅದಕ್ಕೆ ಬಿಲ್ ಮಾಡಿರುವುದು 8 ಕೋಟಿ ರೂಪಾಯಿಗಳು. ಇನ್ನೂ ಬಿಲ್ ಮಾಡಬೇಕಾಗಿರುವುದು ಬೇಕಾದಷ್ಟು ಇದೆ. ಜುಲೈ 30ರೊಳಗೆ ವರ್ಕ್ ಮುಗಿಸುತ್ತೇವೆ. ಆಗಸ್ಟ್ ಫಸ್ಟ್‌ಗೆ ನೀರು ಕೊಡುತ್ತೇವೆ. ನಿಮ್ಮ ಸರ್ಕಾರ ಮಾಡದೇ ಇರುವುದನ್ನು, ನಾವು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಹಾಗಾದರೆ ತುಂಗಭದ್ರಾ ಡ್ಯಾಮ್ ನಿಮ್ಮ ಸರ್ಕಾರವೇ ಕಟ್ಟಿತ್ತು, ಕೆನಾಲ್ ನೀವೇ ಮಾಡಿದ್ದೀರಿ, ಎಮಲ್ಲಾ ನೀವೇ ಮಾಡಿದ್ದೀರಿ. ಆದರೆ, ನಾನು ಹೇಳುವುದು ಏನೆಂದರೆ, ಉಳಿದಿರತಕ್ಕಂಥ ಈ 12 ಕೋಟಿ ರೂಪಾಯಿಗಳನ್ನು ಈ 15-20 ದಿವಸಗಳಲ್ಲಿ ಖರ್ಚು ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಮಂತ್ರಿಗಳು ಇರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಅವರಿಗೆ ಯಾವುದೇ ಅಧಿಕಾರ ಇರುವುದಿಲ್ಲ. ನೀವು ಹೋಗಿ, ಹೇಳತಕ್ಕಂತಾದ್ದು ಬೇರೆ, ನೀವು ನಿರ್ದೇಶನ ಕೊಡತಕ್ಕಂತಾದ್ದು ಅಥವಾ ಕೆಲಸವನ್ನು ನೋಡತಕ್ಕಂತಾದ್ದು, ಆದರ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂತಾದ್ದು, ನಿಮಗೆ ಅಧಿಕಾರ ಇರತಕ್ಕಂತಾದ್ದು.

ಅಧ್ಯಕ್ಷರು :— ಮಾನ್ಯ ನಾಗೇಗೌಡರೇ, ಈ ಪ್ರಶ್ನೆ ಬಹಳ ಸರಳವಾಗಿದೆ. ನೀವು 8 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ, ನಿಮ್ಮ ಎಸ್ಟಿಮೇಟ್ ಪ್ರಕಾರ ಇನ್ನೂ 12 ಕೋಟಿ ರೂಪಾಯಿಗಳು ಖರ್ಚಾಗಬೇಕು. ಫಸ್ಟ್ ಆಗಸ್ಟ್‌ಗೆ ನೀರು ಕೊಡುತ್ತೇವೆಂದು ಹೇಳಿದಿರಿ. ಅಷ್ಟರೊಳಗಾಗಿ ಹಣ ಖರ್ಚುಮಾಡಿ ನೀರು ಕೊಟ್ಟರೆ ಆಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀರು ಕೊಡಬೇಕೇ ಹೊರತಾಗಿ ದುಡ್ಡು ಖರ್ಚು ಮಾಡುವುದಲ್ಲ.

ಶ್ರೀ ಕೆ.ಎನ್. ನಾಗೇಗೌಡ :— ತಾವು ಹೇಳಿದುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಯಾವುದು ವರ್ಕ್ ಲೈನಿಂಗ್ ಇದೆ, ಕೆನಾಲ್ ರಿಪೇರೀಸ್ ಇರುತ್ತದೆ, ಕಲ್ವರ್ಟ್ ಇರುತ್ತದೆ, ಯಾವುದು ವರ್ಕ್ ಕಂಪ್ಲೀಟ್ ಆಗಿರುತ್ತದೆ, ಅಂತಹ ವರ್ಕ್‌ಗಳಿಗೆ ಬಿಲ್ ಮಾಡಿರುತ್ತೇವೆ. ಆನ್‌ಗೋಯಿಂಗ್ ವರ್ಕ್‌ಗಳಿಗೆ ಬಿಲ್ ಆಗಿರುವುದಿಲ್ಲ ಬಹುಶ: 20-22ರೋಳಗೆ ಮುಗಿದ ತಕ್ಷಣವೇ ಸುಮಾರು 60-70 ಐಟಂಗಳಿಗೆ ಒಟ್ಟಿಗೆ ಬಿಲ್ ಮಾಡುತ್ತೇವೆ; ಪೇಮೆಂಟ್ ಆಗುತ್ತದೆ.

ಅಧ್ಯಕ್ಷರು :— 1ನೇ ತಾರೀಖಿಗೆ ನೀರು ಕೊಡುತ್ತೀರಾ?

ಶ್ರೀ ಕೆ.ಎನ್. ನಾಗೇಗೌಡ :— ಖಂಡಿತವಾಗಿಯೂ ಕೊಡುತ್ತೇವೆ. ತಾವು ಹೇಳಿದ ಮೇಲೆ ಮುಗಿದು ಹೋಯಿತು.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಲಾಗಿದೆ. ಪುನ: ಮೂರುವರೆ ಗಂಟೆಗೆ ಸಮಾವೇಶಗೊಳ್ಳುತ್ತೇವೆ.

(ಸದನವು ಮಧ್ಯಾಹ್ನ 2 ಘಂಟೆ 27 ನಿಮಿಷಕ್ಕೆ ಮುಕ್ತಾಯಗೊಂಡು

ಪುನ: 3. ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

(ಸಭೆಯು 3-40 ನಿಮಿಷಕ್ಕೆ ಪುನ: ಸಮಾವೇಶಗೊಂಡಿತು) (ಸಭಾಧ್ಯಕ್ಷ ಪೀಠವನ್ನು ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಸ್. ರಮೇಶ್ ಕುಮಾರ್‌ರವರು ಅಲಂಕರಿಸಿದರು)

(ಗ) ಕೆಲವು ಮಂತ್ರಿಗಳು ತಮ್ಮ ಪದವಿಗಳಿಗೆ ರಾಜೀನಾಮೆ ನೀಡಿರುವ ಬಗ್ಗೆ ವದಂತಿ.

ಶ್ರೀ ಯು.ಆರ್. ಸಭಾಪತಿ :— ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಕೆಲವು ಜನ ಮಾನ್ಯ ಸಚಿವರುಗಳು ಹಾಗೂ ಕೆಲವರು ಮಾನ್ಯ ಸದಸ್ಯರುಗಳು ಕಾಣಿಸುತ್ತಾ ಇಲ್ಲ. ಮಾನ್ಯ ಸಚಿವರುಗಳು ಕೆಲವರು ತಮ್ಮ ಮಂತ್ರಿ ಪದವಿಯಲ್ಲಿದ್ದಾರೋ ಇಲ್ಲವೋ ಎಂಬುದು ನಮಗೆ ತಿಳಿಯುತ್ತಿಲ್ಲ. ತಮಗೆ ಏನಾದರೂ ಮಾಹಿತಿಗಳು ಇದ್ದಲ್ಲಿ ಯಾವ ಯಾವ ಮಾನ್ಯ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂಬುದನ್ನು ನಮಗೆ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು :— ಮಾನ್ಯ ಸಚಿವರುಗಳು ರಾಜೀನಾಮೆ ಕೊಟ್ಟರೆ ಮಾನ್ಯ ಮುಖ್ಯಮಂತ್ರಿಗಳವರಿಗೆ ಮತ್ತು ರಾಜ್ಯಪಾಲರಿಗೆ ಗೊತ್ತಾಗುತ್ತದೆ. ಮಾನ್ಯ ಸದಸ್ಯರುಗಳು ರಾಜೀನಾಮೇ ಕೊಟ್ಟರೆ ನನಗೆ ಗೊತ್ತಾಗುತ್ತದೆ. ಸಭಾಧ್ಯಕ್ಷರಾಗಿ ನನಗೆ ಯಾರೂ, ಯಾವ ಮಂತ್ರಿಗಳೂ ರಾಜೀನಾಮೆ ಕೊಟ್ಟಿಲ್ಲ. ಆದುದರಿಂದ ನಮ್ಮ ಕಲಾಪಗಳನ್ನು ಮುಂದುವರಿಸೋಣ. ಈ ಬಿಲ್ ತೆಗೆದುಕೊಂಡು ಆದ ಮೇಲೆ ಮಾನ್ಯ ರೆಡ್ಡಿಯವರ ಭಾಷಣವನ್ನು ಪ್ರಾರಂಭಿಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಎಂ.ಎಸ್. ಪಾಟೀಲರು ಈಗ ಒಂದು ತಿದ್ದುಪಡಿಯನ್ನು ತಂದಿದ್ದಾರೆ, ಆದರೆ, ಅವರು 10ನೇ ತಾರೀಖಿನ ನಂತರ ಸಮಾನ ಮನಸ್ಕರ ಜೊತೆ ಸೇರಿ ಬೇರೊಂದು ಪಕ್ಷಕ್ಕೆ ಸೇರಬೇಕೆಂದು ನಿರ್ಣಯ ತೆಗೆದುಕೊಂಡ ಮೇಲೆ ಕೇವಲ 4 ದಿವಸಕ್ಕಾಗಿ ಈ ಹಂತದಲ್ಲಿ ಈ ಬಿಲ್ಲನ್ನು ಯಾಕೆ ತರಬೇಕಾಗಿತ್ತು? ಮುಂದೆ ಬರುವ ಸರ್ಕಾರಗಳು ಈ ಬಗ್ಗೆ ಕೆಲಸ ಮಾಡಲಿ ಎಂದು ತಂದರು ಇದರಿಂದೇನೂ ಪ್ರಯೋಜನವೂ ಆಗುವುದಿಲ್ಲ; ಅವರ ಉದ್ದೇಶ ಸಫಲವೂ ಆಗುವುದಿಲ್ಲ, ಮಾನ್ಯ ರಾಜ್ಯಪಾಲರಿಂದ ಅವರ ಅನುಮತಿ ಪಡೆದು ಬರುವವರೆಗೆ ಈ ಪಾರ್ಟಿಯೊಳಗೆ ಅವರು ಇರುವುದೂ ಇಲ್ಲ, ಈ ಸರ್ಕಾರ ಉಳಿಯುವುದೂ ಇಲ್ಲ. ಅವರೇ ಹೊರಗೆ ಹೋದಮೇಲೆ ಸರ್ಕಾರ ಎಲ್ಲಿ ಉಳಿಯುತ್ತದೆ!

ಅಧ್ಯಕ್ಷರು :— ನೀವು ಮಾನ್ಯ ಬೈರೇಗೌಡರು ನಿಮ್ಮ ಮುಂದೆ ಕೂತಿದ್ದಾರೆ ಎನ್ನುವ ವಿಚಾರವನ್ನು ಗಮನಕ್ಕೇ ತೆಗೆದುಕೊಳ್ಳದೆ ಇಷ್ಟೆಲ್ಲ ಮಾತನಾಡುತ್ತಿದ್ದೀರಿ?